ನಿ-330 (55)

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶಾಂತಾರಾಮ್ ಸಿದ್ದಿರವರು ನಿ-330ರಡಿ ಮಂಡಿಸಿರುವ ಸೂಚನೆಗೆ ಉತ್ತರ.

"ಮೈಸೂರು ಜಿಲ್ಲೆ, ಹೆಚ್.ಡಿ. ಕೋಟೆ ತಾಲೂಕಿನ ಡಿ.ಬಿ. ಕುಪ್ಪೆ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಅತಿ ಹೆಚ್ಚು ಬುಡಕಟ್ಟು ಜನ ವಾಸಿಸುತ್ತಿದ್ದಾರೆ. ಆದರೆ ಸಂಬಂಧಪಟ್ಟ ಗ್ರಾಮ ಪಂಚಾಯತಿಯಿಂದ ಅನೇಕ ಮೂಲಭೂತ ಸೌಕರ್ಯಗಳನ್ನು ಒದಗಿಸಿರುವುದಿಲ್ಲ(ಇದಕ್ಕೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಿಗೆ ಈ ವಿಷಯವನ್ನು ಗಮನಕ್ಕೆ ತಂದು ಸಂಬಂಧಪಟ್ಟ ಪಂಚಾಯತಿಗೆ ಸಲಹೆ-ಸೂಚನೆ ನೀಡಲು ಕೋರುತ್ತೇನೆ"

**ನಿಯಮ-330ರಡಿಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ:**

ಡಿ.ಬಿ.ಕುಪ್ಪೆ ಗ್ರಾಮ ಪಂಚಾಯತಿಯು ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲ್ಲೂಕಿನ ಕರ್ನಾಟಕ ರಾಜ್ಯದ ಗಡಿ ಭಾಗದ ಕೇರಳ ರಾಜ್ಯದ ಅಂಚಿನಲ್ಲಿದ್ದು, ಈ ಗ್ರಾಮ ಪಂಚಾಯತಿಯಲ್ಲಿ ಅತಿ ಹೆಚ್ಚು ಗಿರಿಜನ-ಬುಡಕಟ್ಟು ಜನರು ವಾಸಿಸುತ್ತಿದ್ದು, ಒಟ್ಟು ಜನ ಸಂಖ್ಯೆ 6855 ಇರುತ್ತದೆ. ಇದು ತಾಲ್ಲೂಕು ಕೇಂದ್ರದಿಂದ ಸುಮಾರು 47 ಕಿ.ಮೀ. ದೂರದಲ್ಲಿರುತ್ತದೆ.

**ಗ್ರಾಮವಾರು ಜನಸಂಖ್ಯೆಯ ವಿವರ ಈ ಕೆಳಕಂಡಂತಿದೆ:**

| ಕ್ರ ಸಂ. | ಹಾಡಿಯ ಹೆಸರು | ಜನ ಸಂಖ್ಯೆ | ಕುಟುಂಬ ಗಳು |
|---|---|---|---|
| 1 | ಬಳ್ಳೆಹಾಡಿ | 510 | 106 |
| 2 | ಗೋಳೂರುಹಾಡಿ | 412 | 87 |
| 3 | ಹೊಸೂರುಹಾಡಿ | 15 | 11 |
| 4 | ಸೇಬಿನಕೊಲ್ಲಿಹಾಡಿ | 17 | 10 |
| 5 | ಆನೆಮಾಳದ ಹಾಡಿ | 501 | 115 |
| 6 | ಮಾನಿಮೂಲೆಹಾಡಿ | 157 | 28 |
| 7 | ಡಿ.ಬಿ.ಕುಪ್ಪೆಹಾಡಿ | 8 | 4 |
| 8 | ಮೂಲೆಯೂರುಹಾಡಿ | 121 | 26 |
| 9 | ತಿಮ್ಮನಹೊಸಹಳ್ಳಿಹಾಡಿ | 75 | 18 |
| 10 | ಬಾವಲಿಹಾಡಿ | 130 | 27 |
| 11 | ಸಿ.ಬಿ.ಕುಪ್ಪೆಹಾಡಿ | 28 | 7 |
| | | 1974 | 439 |

ಡಿ.ಬಿ.ಕುಪ್ಪೆ ಗ್ರಾಮ ಪಂಚಾಯತಿಯ ವ್ಯಾಪ್ತಿಯ ಹಾಡಿಗಳಲ್ಲಿ 439 ಗಿರಿಜನ ಬುಡಕಟ್ಟು ಕುಟುಂಬಗಳಿದ್ದು, ಒಟ್ಟು 1974 ಜನರು ವಾಸಿಸುತ್ತಿರುತ್ತಾರೆ. ಇವರುಗಳಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ಹಾಗೂ ಇತರೆ ಇಲಾಖೆಯ ಸಹಯೋಗದೊಂದಿಗೆ ಈ ಕೆಳಕಂಡ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ.

- ಹಾಡಿಗೆ ಸಂಪರ್ಕಿಸುವ 13 ಕಿ.ಮೀ ಕಚ್ಚಾ ರಸ್ತೆಗಳನ್ನು ನಿರ್ಮಿಸಲಾಗಿದೆ.
- 01 ಸರ್ಕಾರಿ ಗಿರಿಜನ ಆಶ್ರಮ ಶಾಲೆ ಇದ್ದು ಒಟ್ಟು 225 ಬುಡಕಟ್ಟು ವಿದ್ಯಾರ್ಥಿಗಳಿದ್ದು, ಮಕ್ಕಳಿಗೆ ಉಚಿತ ಊಟ ವಸತಿಯೊಂದಿಗೆ ಶೈಕ್ಷಣಿಕ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.
- 05 ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳು,
- 05 ಅಂಗನವಾಡಿ ಕೇಂದ್ರಗಳು,
- 01 ಪ್ರಾಥಮಿಕ ಆರೋಗ್ಯ ಕೇಂದ್ರ,
- ಕುಡಿಯುವ ನೀರಿಗಾಗಿ 2 ಶುದ್ಧ ಕುಡಿಯುವ ನೀರು ಘಟಕಗಳನ್ನು ನಿರ್ಮಿಸಲಾಗಿದೆ. 43 ತೊಂಬೆಗಳು, 07 ಕೊಳವೆ ಬಾವಿಗಳು, 08 ಸಾರ್ವಜನಿಕ ತೆರೆದ ಬಾವಿಗಳು ಲಭ್ಯವಿರುತ್ತದೆ.
- ಸಾರ್ವಜನಿಕ ಬೀದಿ ದೀಪಗಳನ್ನು ಗ್ರಾಮ ಪಂಚಾಯತಿ ವತಿಯಿಂದ ಅಳವಡಿಸಲಾಗಿದೆ ಹಾಗೂ ಹಾಡಿಗಳಲ್ಲಿ 439 ಕುಟುಂಗಗಳಲ್ಲಿ 332 ಕುಟುಂಬಗಳಿಗೆ ಸೋಲಾರ್ ವಿದ್ಯುತ್ ದೀಪಗಳನ್ನು ಅಳವಡಿಸಲಾಗಿದೆ. ಉಳಿಕೆ 107 ಕುಟುಂಬಗಳಿಗೆ ಸೋಲಾರ್ ವಿದ್ಯುತ್ ದೀಪ ಅಳವಡಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ.
- ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಈಗಾಗಲೇ 341 ಜಾಬ್ ಕಾರ್ಡ್‌ಗಳನ್ನು ನೀಡಲಾಗಿದೆ. ಹಾಗೂ ಡಿ.ಬಿ.ಕುಪ್ಪೆ ಗ್ರಾಮ ಪಂಚಾಯತಿಯಲ್ಲಿ 2021-22ನೇ ಸಾಲಿನಲ್ಲಿ ಒಟ್ಟು ರೂ.21.89/-ಲಕ್ಷಗಳ ಕೂಲಿ ಹಣವನ್ನು ಪಾವತಿ ಮಾಡಲಾಗಿದೆ.
- ಸ್ವಚ್ಛ ಭಾರತ್ ಯೋಜನೆ(ಗ್ರಾಮೀಣ) ಅಡಿಯಲ್ಲಿ ಈಗಾಗಲೇ 51 ಶೌಚಾಲಯಗಳನ್ನು ನಿರ್ಮಿಸಿಕೊಡಲಾಗಿದೆ.
- 15ನೇ ಹಣಕಾಸು ಯೋಜನೆಯಡಿ ಹಾಗೂ ಗ್ರಾಮ ಪಂಚಾಯತಿಯ ಇತರೆ ಯೋಜನೆಗಳಲ್ಲಿ ಲಭ್ಯವಿರುವ ಅನುದಾನದಲ್ಲಿ ಆಗಿದ್ದಾಂಗೆ ಹಾಡಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ.

ಮುಂದುವರೆದು ಈ ಹಾಡಿಗಳ ಪ್ರದೇಶಗಳು **ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರದೇಶವಾದ್ದರಿಂದ ಮನೆ ಮತ್ತು ಇತರೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು** NTCA ನವದೆಹಲಿ ರವರಿಂದ ಪೂರ್ವಾನುಮತಿ ಪಡೆಯಬೇಕಿದ್ದು, ಈಗಾಗಲೇ ಅನುಮತಿಗೆ ಪತ್ರ ಬರೆಯಲಾಗಿದೆ ಎಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಮೈಸೂರು ಜಿಲ್ಲಾ ಪಂಚಾಯತ್ ರವರು ವರದಿ ನೀಡಿರುತ್ತಾರೆ.

NTCA ನವದೆಹಲಿರವರಿಂದ ಅನುಮತಿ ದೊರೆತ ಕೂಡಲೇ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿ ಚಾಲ್ತಿಯಲ್ಲಿರುವ ವಿವಿಧ ಯೋಜನೆಗಳ ಮುಖಾಂತರ ಡಿ.ಬಿ.ಕುಪ್ಪೆ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಬುಡಕಟ್ಟು ಜನರಿಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು.

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು